ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

**ಸಂಖ್ಯೆ :** ಸ.ಶಿ.ಅ/ಹೆ.ಶಿ/ಎನ್.ಪಿ.ಇ.ಜಿ.ಇ.ಎಲ್/ಮಾರ್ಗಸೂಚಿ/2012-13 ದಿನಾಂಕ:16.07.2013

**ಸುತ್ತೋಲೆ**

**ವಿಷಯ:** 'ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ' ರಾಷ್ಟ್ರೀಯ ಕಾರ್ಯಕ್ರಮವನ್ನು (NPEGEL) 2013-14 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

**ಉಲ್ಲೇಖ:** 1) ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:16.06.2011
2) ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:01.06.2012
3) ದಿನಾಂಕ:15-04-2013 ರಂದು ನವದೆಹಲಿಯಲ್ಲಿ ನಡೆದ ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುಮೋದನಾ ಮಂಡಳಿ ಸಭೆ.
4) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಎನ್.ಪಿ.ಇ.ಜಿ.ಇ.ಎಲ್/2012-13 ದಿನಾಂಕ: 07.05.2013.
5) ಈ ಕಛೇರಿಯ ಕಾರ್ಯಕಾರಿ ಸಮಿತಿಯ ಸಭಾ ನಡಾವಳಿಯ ದಿನಾಂಕ: 10.06.2013.

*~*~*~*~*~*

2013-14ನೇ ಸಾಲಿಗೆ ಉಲ್ಲೇಖಿತ 3ರ ಸಭೆಯ ನಡವಳಿಯಂತೆ, 64 ಹಿಂದುಳಿದ ಬ್ಲಾಕ್‌ಗಳ 1451 ಮಾದರಿ ಕ್ಲಸ್ಟರ್ ಶಾಲೆಗಳಿಗೆ ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮದಡಿ ಅನುದಾನ ಮಂಜೂರು ಆಗಿರುವುದಿಲ್ಲ. ಕಾರಣ ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿರುವುದನ್ನು ಉಲ್ಲೇಖ-4ರ ಪತ್ರದಲ್ಲಿ ಸ್ಮರಿಸಲಾಗಿದೆ.

ಮುಂದುವರೆದು 2011-12 ನೇ ಸಾಲಿನಲ್ಲಿ ಅನುಮೋದನೆಯಾದ 547 ಮಾದರಿ ಕ್ಲಸ್ಟರ್ ಶಾಲೆಗಳಿಗೆ ಪ್ರತಿ ಕ್ಲಸ್ಟರ್‌ಗೆ ರೂ.2 ಲಕ್ಷ ಅನುದಾನವು **'ಕೌಶಲ ಅಭಿವೃದ್ಧಿ ಚಟುವಟಿಕೆ'**ಗಳಿಗೆ ಮಂಜೂರಾಗಿದ್ದು, ಸದರಿ ಅನುದಾನವನ್ನು ಜಿಲ್ಲಾವಾರು ಈಗಾಗಲೆ ಉಲ್ಲೇಖ-1 ಮತ್ತು 2 ರಂತೆ ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು 3 ವರ್ಷಗಳ ಅವಧಿಯಲ್ಲಿ ಉಪಯೋಗಿಸಲು ತಿಳಿಸಲಾಗಿರುತ್ತದೆ. ಇದರ ಪ್ರಮಾಣವು 2011-12 ನೇ ಸಾಲಿಗೆ ಶೇ. 40 ರಷ್ಟು ಮೊತ್ತ (ರೂ.80,000/-), 2012-13 ನೇ ಸಾಲಿಗೆ ಶೇ 30 ರಷ್ಟು ಮೊತ್ತ (ರೂ. 60,000/-), 2013-14 ನೇ ಸಾಲಿಗೆ ಶೇ. 30 ರಷ್ಟು ಮೊತ್ತ (ರೂ. 60,000/-) ವನ್ನು ಪ್ರತಿ ಕ್ಲಸ್ಟರಿನಲ್ಲಿ ವೆಚ್ಚ ಮಾಡಲು ತಿಳಿಸಲಾಗಿರುತ್ತದೆ. **2013-14 ನೇ ಸಾಲಿಗೆ ಶೇ. 30 ರಷ್ಟು ಮೊತ್ತ (ರೂ. 60,000/-) ವನ್ನು ಪ್ರತಿ ಕ್ಲಸ್ಟರ್ ಕೇಂದ್ರದಲ್ಲಿ ವೆಚ್ಚ ಮಾಡಬೇಕಾಗಿರುತ್ತದೆ.**

2013-14ನೇ ಸಾಲಿನಲ್ಲಿ 547 ಮಾದರಿ ಕ್ಲಸ್ಟರ್ ಶಾಲೆಗಳಲ್ಲಿ ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮ ಅನುಷ್ಠಾನಕ್ಕಾಗಿ ಅನುಮೋದಿತ ಅನುದಾನವನ್ನು ಮಾದರಿ ಕ್ಲಸ್ಟರ್ ಶಾಲೆಗಳಿಗೆ ಬಿಡುಗಡೆ ಯಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಕಾರ್ಯಕ್ರಮ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವುದು. ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮ ಅನುಷ್ಠಾನಕ್ಕಾಗಿ ಹಿಂಬದಿ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡದೆ ಮಾದರಿ ಕ್ಲಸ್ಟರ್ ಕೇಂದ್ರ ಶಾಲೆಯಿಂದಲೇ ಬಿ.ಇ.ಓ/ಬಿ.ಆರ್.ಸಿ.ರವರಿಂದ ನಿಗದಿಪಡಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಇದರಿಂದ ಕಾರ್ಯಕ್ರಮದ ಅನುಷ್ಠಾನ ಮತ್ತು ದಾಖಲೀಕರಣ ಸುಗಮವಾಗಿ ಆಗುವ ಆಶಯ ಹೊಂದಲಾಗಿದೆ.

**ಈ ಮೊತ್ತದಲ್ಲಿ ಈ ಕೆಳಗಿನ ವಸ್ತುಗಳನ್ನು ಖರೀದಿಸಬಹುದು**

- ಹೊಲಿಗೆ ಯಂತ್ರಗಳು, ಕಂಪ್ಯೂಟರ್, ಸೈಕಲ್‌ಗಳು, ತೋಟಗಾರಿಕೆ ಉಪಕರಣಗಳು, ಸಂಗೀತ ಉಪಕರಣಗಳು ಇತ್ಯಾದಿಗಳು.ಬಟ್ಟೆ ಹೊಲಿಯುವುದು; ನೂಲುವುದು; ನೇಯ್ಗೆ; ಕಸೂತಿ; ಸೈಕಲ್, ಟಿ.ವಿ., ರೇಡಿಯೋ, ಮೊಬೈಲ್, ವಿದ್ಯುತ್ ಉಪಕರಣಗಳು-ಇತ್ಯಾದಿ ವಸ್ತುಗಳ ರಿಪೇರಿ; ಎರೆ ಹುಳು ಗೊಬ್ಬರ; ಜೇನು ಕೃಷಿ; ಅಕ್ವೇರಿಯಂ ನಿರ್ವಹಣೆ; ಕಸಿ ಮಾಡುವುದು; ಬಡಗಿ ಕೆಲಸದ ಕೌಶಲ; ವಿದ್ಯುತ್ ವೈರಿಂಗ್ ; ಬ್ಯೂಟೀಶಿಯನ್ ಕೌಶಲ; ಅಣಬೆ ಕೃಷಿ – ಇತ್ಯಾದಿ ಕೌಶಲಗಳು. ಈ ಕೌಶಲಗಳ ಜೊತೆ ಕಾರ್ಯಾನುಭವದ ಕೌಶಲಗಳನ್ನು ಉದಾ: ವಿವಿಧ ಬಗೆಯ ಮಾಪಕಗಳು ; ಆಹಾರ ವಸ್ತುಗಳು; ಉಪ್ಪಿನಕಾಯಿ ತಯಾರಿಕೆ, ಹಪ್ಪಳ, ಸಂಡಿಗೆ ಮತ್ತು ಬೇಕರಿ ಉತ್ಪನ್ನಗಳ ತಯಾರಿಕೆ, ಶೃಂಗಾರ ವಸ್ತು ತಯಾರಿಕೆ ; ಬುಟ್ಟಿ ತಯಾರಿಕೆ; ಗಂಧದ ಕಡ್ಡಿ; ಮೇಣದಬತ್ತಿ ; ಸೀಮೆಸುಣ್ಣ ; ಆರೋಗ್ಯ ವರ್ಧಕಗಳು; ಮರಗೆಲಸ; ಕುಂಬಾರಿಕೆ, ಹಲ್ಲಿಪುಡಿ ತಯಾರಿಕೆ, ಫಿನಾಯಿಲ್ ಮತ್ತು ಸೋಪ್ ಪೌಡರ್; ನೇಯ್ಗೆ; ಗೊಂಬೆಗಳ ತಯಾರಿಕೆ; ಇತ್ಯಾದಿ ವಸ್ತುಗಳ ತಯಾರಿಕೆ.

**ವಿಶೇಷ ಸೂಚನೆ :** ಈ ಮೇಲೆ ನೀಡಿರುವ ಪಟ್ಟಿಯು ಸಲಹಾತ್ಮಕವಾಗಿದ್ದು, ಆಯಾ ಬ್ಲಾಕ್‌ನ ಸನ್ನಿವೇಶ, ಪರಿಸ್ಥಿತಿ ಹಾಗೂ ಅವಶ್ಯಕತೆಗಳಿಗೆ ಅಗತ್ಯವಾದ ವಸ್ತುಗಳನ್ನು ಖರೀದಿಸಲು ಸೂಚಿಸಿದೆ. ಬ್ಲಾಕ್ ಹಂತದ ಎನ್.ಪಿ.ಇ.ಜಿ.ಇ.ಎಲ್. ಸಮಿತಿಯು ಅಗತ್ಯವಾದ ವಸ್ತುಗಳನ್ನು ಪಟ್ಟಿ ಮಾಡಿ, ಅಂತಿಮಗೊಳಿಸುವುದು. ಕ್ಲಸ್ಟರ್ ಹಂತದ ಸಮಿತಿಯು ಸಭೆ ಸೇರಿ ಸ.ಶಿ.ಅ.ದ ನಿಯಮಾನುಸಾರ ಅಗತ್ಯ ವಸ್ತುಗಳನ್ನು ಖರೀದಿಸಿ, ಉಪಯೋಗಿಸುವುದು.

1. ಎನ್.ಪಿ.ಇ.ಜಿ.ಇ.ಎಲ್ ಅಡಿ ಕೈಗೊಳ್ಳುವ ವಸ್ತುಗಳ ಖರೀದಿಯನ್ನು ಆಗಸ್ಟ್ 2013 ರ ಒಳಗಾಗಿ ಹಾಗೂ ಹಮ್ಮಿಕೊಳ್ಳುವ ಎಲ್ಲಾ ಚಟುವಟಿಕೆಗಳನ್ನು ಡಿಸೆಂಬರ್ 2013 ರೊಳಗೆ ಪೂರೈಸಿ ಅನುಬಂಧ 2ರಂತೆ ಮಾಹಿತಿಯನ್ನು ನೀಡುವುದು.
2. <u>**ಮೇಲುಸ್ತುವಾರಿ ಮತ್ತು ವರದಿ:**</u> ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದ ಉಸ್ತುವಾರಿಯ ಸಂದರ್ಭದಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಮಾಡಿರುವ ಬಗ್ಗೆ, ಎನ್.ಪಿ.ಇ.ಜಿ.ಇ.ಎಲ್ ಕಾರ್ಯ ಚಟುವಟಿಕೆಗಳು ನಿಗದಿತ ಸಮಯದಲ್ಲಿ ನಡೆದಿರುವ ಬಗ್ಗೆ, ಕ್ಲಸ್ಟರ್ ಶಾಲಾ ಸಮಿತಿ ತನ್ನ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬಗ್ಗೆ ಪರಿಶೀಲಿಸಿ, ಕೊರತೆ ಕಂಡು ಬಂದಲ್ಲಿ ಸೂಕ್ತ ಹಿಮ್ಮಾಹಿತಿಯನ್ನು ನೀಡಿ, ಸರಿಪಡಿಸಲು ಸೂಚಿಸಿದೆ.

**ಅನುಬಂಧ–2**

**Districtwise New Modal Cluster Schools Approved in the year 2011-12**

| Sl No | District | New MCS Approved in 2011-12-(Only-Dept) |
|---|---|---|
| 1 | Bagalkote | 51 |
| 2 | Bidar | 35 |
| 3 | Bellary | 22 |
| 4 | Koppal | 28 |
| 5 | Gulbarga | 60 |
| 6 | Raichur | 51 |
| 7 | Bijapur | 79 |
| 8 | Bangalore Urban | 0 |
| 9 | Belgaum | 34 |
| 10 | Chikkaballapura | 23 |
| 11 | Chitraduga | 17 |
| 12 | Davangere | 7 |
| 13 | Dharwad | 9 |
| 14 | Gadag | 18 |
| 15 | Hassan | 7 |
| 16 | Kolar | 40 |
| 17 | Mysore | 23 |
| 18 | Ramanagar | 8 |
| 19 | Tumkur | 2 |
| 20 | Yadgiri | 33 |
| | **Total** | **547** |

ಸಹಿ/–
ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

## ಅನುಬಂಧ–2

## ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದ ಪ್ರಗತಿ ನಮೂನೆ

## ಪ್ರಗತಿಯನ್ನು ಜಿಲ್ಲಾವಾರು ಸಲ್ಲಿಸಬೇಕು

**ಜಿಲ್ಲೆಯ ಹೆಸರು ..................**

**ಬ್ಲಾಕ್‌ನ ಹೆಸರು ....................**

| ಕ್ರ ಸಂ | ಖರೀದಿಸಿದ ವಸ್ತುಗಳು (ಎಂ.ಸಿ.ಎಸ್. ವಾರು) | ಕೈಗೊಂಡ ಚಟುವಟಿಕೆಗಳ ಸಂಕ್ಷಿಪ್ತ ವಿವರ | ಅನುಮೋದನೆಯಾದ ಅನುದಾನ | ವೆಚ್ಚವಾದ ಅನುದಾನ | ಉಳಿಕೆಯಾದ ಅನುದಾನ | ಎನ್.ಪಿ.ಇ.ಜಿ.ಇ.ಎಲ್ ಫಲಾನುಭವಿಗಳ ಬಾಲಕಿಯರ ಸಂಖ್ಯೆ | | | | | | | ಷರಾ |
|---|---|---|---|---|---|---|---|---|---|---|---|---|---|
| | | | | | | ಎಸ್.ಸಿ | ಎಸ್.ಟಿ | ಓ.ಬಿ.ಸಿ | ಮುಸ್ಲಿಂ | ಇತರೆ | ವಿಕಲಚೇತನ ಮಕ್ಕಳ ಸಂಖ್ಯೆ | ಒಟ್ಟು | |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| | ಒಟ್ಟು | | | | | | | | | | | | |

**ಡಿವೈಪಿಸಿರವರ ಸಹಿ**
**(ಮೊಹರಿನೊಂದಿಗೆ)**

**ಉಪನಿರ್ದೇಶಕರು(ಆ)**
**(ಮೊಹರಿನೊಂದಿಗೆ)**

**ಮುಂದಿನ ಕ್ರಮಕ್ಕಾಗಿ,**

1. ಸಂಬಂಧಿಸಿದ ಉಪನಿರ್ದೇಶಕರು (ಆ) ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಸಂಬಂಧಿಸಿದ ಉಪನಿರ್ದೇಶಕರು (ಆ) ರವರ ಮೂಲಕ ಡಿವೈಪಿಸಿ, ಬಿಇಓ, ಬಿಆರ್‌ಸಿ ಮತ್ತು ಕ್ಲಸ್ಟರ್ ಶಾಲಾ ಮುಖ್ಯಶಿಕ್ಷಕರಿಗೆ.

**ಅನುಪಾಲನೆಗಾಗಿ,**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ.
2. ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಮಾಹಿತಿಗೆ.

**ಇವರಿಗೆ ಮಾಹಿತಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.**

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.